ತಾರೀಖು 3ನೆ ಜನವರಿ 1907.

ನಂ. 6013—ಸ್ಯಾನಿಟರಿ 21-06—59, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿ ಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಸಂತೆ ಮತ್ತು ಉತ್ಸವಕ್ಕೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವುದನ್ನು ನಿಷೇಧಿಸಿರುತ್ತಾರೆ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟ್.	ತಾರೀಖು. ಇಂದ.	ತಾರೀಖು. ಗೆ.	ಅಧಿಕಾರ.
ತೈಪೂಸಂ ಉತ್ಸವ ಮತ್ತು ದನಗಳ ಸಂತೆ.	ಕಳ್ಳುಗುಮಲೈ.	ಒಟ್ಟಪಿದರಂ	ತಿನ್ನವಲ್ಲಿ.	19—1—07	9—2—07	ಫರ್ಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1906ನೆ ಇಸವಿ ಡಿಸೆಂಬರ್ 21ನೆ ಮತ್ತು ಂ 1343ನೆ ನಂಬರ್ ವೆಮೊ ಪ್ರಕಾರ.
ಪಟ್ಟಾಭಿರಾಮ ಸ್ವಾಮಿ ರಥೋತ್ಸವ.	ಕಲ್ಯಾಣದುರ್ಗ.	ಕಲ್ಯಾಣದುರ್ಗ.	ಅನಂತಪುರ.	24—1—07	31—1—07	ಡಿಟೋ ಡಿಸೆಂಬರ್ 24ನೆ ಮತ್ತು ಂ 1356ನೆ ನಂಬರು ವೆಮೊ ಪ್ರಕಾರ.
ಹಂಜರೇಶ್ವರ ಸ್ವಾಮಿ ರಥೋತ್ಸವ.	ಹೇಮಾವತಿ.	ಮಡಕಶಿರ.	ಡಿಟೋ	5—2—07	15—2—07	ಡಿಟೋ.
ನರಸಿಂಹಸ್ವಾಮಿ ರಥೋತ್ಸವ.	ರೊಳ್ಳ.	ಡಿಟೋ	ಡಿಟೋ	22—2—07	3—3—07	ಡಿಟೋ

ತಾರೀಖು 9ನೆ ಜನವರಿ 1907.

ನಂ. 6172—ಸ್ಯಾನಿಟರಿ 141-06—6, ತುಮಕೂರು ಡಿಸ್ಟ್ರಿಕ್ಟು ಕೊರಟಗೆರೆ ಸಬ್ ತಾಲ್ಲೂಕಿನ ಕ್ಯಾಮೇನಹಳ್ಳಿಗೆ ಶ್ರೀ ಅಂಜನೇಯಸ್ವಾಮಿಯವರ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮತ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮತ್ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಜನವರಿ 20ನೆ ತಾರೀಖಿನಿಂದ 1907ನೆ ಜನವರಿ 28ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನ ವಿಗೆ ವಿರೋಧವಾಗಿ ಮೇಲ್ಕಂಡ ರಥೋತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 9ನೆ ಜನವರಿ 1907.

ನಂ. 6174—ಸ್ಯಾನಿಟರಿ (21-06)-66, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಸಂತೆ ಮತ್ತು ಉತ್ಸವಕ್ಕೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವುದನ್ನು ನಿಷೇಧಿಸಿರುತ್ತಾರೆ.

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟ್.	ತಾರೀಖು. ಇಂದ.	ತಾರೀಖು. ಗೆ.	ಅಧಿಕಾರ.
ಮಹಾ ಶಿವರಾತ್ರಿ ಉತ್ಸವ.	ಮಹಾನಂದಿ	ನಂದ್ಯಾಲ	ಕರ್ನೂಲು	6—2—07 (ಉಭಯ ದಿನಗಳೂ ಸೇರಿ)	14—2—07	ಫರ್ಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1907ನೆ ಇಸವಿ ಜನವರಿ 4ನೆ ಮತ್ತು ಂ 22ನೆ ನಂಬರ್ ವೆಮೊ ಪ್ರಕಾರ.
ಡಿಟೋ ...	ಓಂಕಾರಂ	ಡಿಟೋ	ಡಿಟೋ		ಡಿಟೋ	ಡಿಟೋ ನಂ. 19ರ ಪ್ರಕಾರ.

ತಾರೀಖು 18ನೆ ಡಿಸೆಂಬರ್ 1906.

ನಂ. 5274—ಮೆಡಿಕಲ್. 154-06—2, ಅಸಿಸ್ಟೆಂಟ್ ಸರ್ಜನ್ಶಿಪ್ಗೆ ಅಭ್ಯಾಯಿನಾಯಡು ಯುವಕರಿಗೆ ಅಸಿಸ್ಟೆಂಟ್ ಸರ್ಜನ್ಗಳ ಎರಡನೆ ತರಗತಿಯಿಂದ ಮೊದಲನೆ ತರಗತಿಗೆ 1906ನೆ ಇಸವಿಯ ಅಕ್ಟೋಬರ್ ಗುರು ತಾರೀಖಿನಿಂದ ಬಡ್ತಿ ಮಾಡಿದೆ.